ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸ್ಥಳೀಯ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಮುರುಗೇಶ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

(ಅ) ಕೆ.ಐ.ಎ.ಡಿ.ಬಿ.ಯ ವಿಶೇಷ ಆರ್ಥಿಕ ವಲಯ (ಎಸ್ಇಝಡ್) ಪಜೀರು ಗ್ರಾಮ (ದ.ಕ.) ಇಲ್ಲಿಗೆ ಶಾಶ್ವತ ಕುಡಿಯುವ ನೀರನ್ನು ನೇತ್ರಾವತಿ ನದಿಯಿಂದ ಪೈಪಲೈನ್ ಮೂಲಕ ಸರಬರಾಜು ಮಾಡಲು ಯೋಜನೆ ರೂಪಿಸಲಾಗಿದೆ.

(ಆ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಇ) ಸದ್ಯಕ್ಕೆ ಈ ವ್ಯವಸ್ಥೆಯ ಮೂಲಕ ಸ್ಥಳೀಯ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಉದ್ದೇಶಿಸಿರುವುದಿಲ್ಲ.

ಮೃಗಾಲಯಗಳಲ್ಲಿ ಸಾವಿಗೀಡಾಗುತ್ತಿರುವ ಪ್ರಾಣಿ/ಪಕ್ಷಿಗಳು

356 (803) ಶ್ರೀ ಖಾದರ್ ಯು.ಟಿ. (ಮಂಗಳೂರು) ಅರಣ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ತಿಳಿಸುವರೇ:–

(ಅ) ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವ ಮೃಗಾಲಯಗಳಲ್ಲಿನ ಪ್ರಾಣಿಗಳು ಅಕಾಲಿಕವಾಗಿ ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದುವರೆವಿಗೂ ಸಾವಿಗೀಡಾದ ಪ್ರಾಣಿ/ಪಕ್ಷಿಗಳ ಸಂಖ್ಯೆ ಎಷ್ಟು, ಮೃಗಾಲಯವಾರು ವಿವರ ಒದಗಿಸುವುದು);

(ಇ) ಮೃಗಾಲಯದ ಪ್ರಾಣಿ/ಪಕ್ಷಿಗಳಿಗೆ ಸರಿಯಾದ ಆರೈಕೆ ನೀಡದೇ ಇರುವುದು ನಿಜವೇ; ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ (ವಿವರ ಒದಗಿಸುವುದು)?

ಶ್ರೀ ಸಿ.ಪಿ. ಯೋಗೇಶ್ವರ (ಮಾನ್ಯ ಅರಣ್ಯ ಸಚಿವರು):

(ಅ) ಹೌದು

(ಆ) 2011–12ನೇ ಸಾಲಿನಲ್ಲಿ ಅಂದರೆ ದಿನಾಂಕ: 1–4–2011 ರಿಂದ 31–1–2012ರ ವರೆಗೆ ಸಾವಿಗೀಡಾದ ಪ್ರಾಣಿ/ಪಕ್ಷಿಗಳ ವಿವರ :

ಸಂಖ್ಯೆಗಳಲ್ಲಿ

ಮೃಗಾಲಯ ಹೆಸರು	ಪ್ರಾಣಿ	ಪಕ್ಷಿ	ಒಟ್ಟು
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು ಮೈಸೂರು	29	19	48
ಬನ್ನೇರುಘಟ್ಟ, ಬಯಾಲಜಿಕಲ್ ಉದ್ಯಾನವನ ಬೆಂಗಳೂರು.	43	4	47
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಳ್ಳಾರಿ	2	1	3
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಗುಲ್ಬರ್ಗಾ	–	–	–
ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ ದಾವಣಗೆರೆ	2	–	2
ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮ ಕಿರು ಮೃಗಾಲಯ ಭೂತರಾಮನಹಟ್ಟಿ, ಬೆಳಗಾವಿ	1	–	1
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಿಂಕದಕಟ್ಟಿ, ಗದಗ್	1	–	1
ಹುಲಿ–ಸಿಂಹಧಾಮ ತ್ಯಾವರೆ ಕೊಪ್ಪ ಶಿವಮೊಗ್ಗ	4	–	4
ಒಟ್ಟು	82	24	106

(ಇ) ಪ್ರಾಣಿಪಕ್ಷಿಗಳ ಯೋಗಕ್ಷೇಮದ ಬಗ್ಗೆ ತೀವ್ರ ನಿಗಾವಹಿಸುತ್ತಿದ್ದು, ವೈಜ್ಞಾನಿಕ ರೀತಿಯಲ್ಲಿ ಆಹಾರ ನಿಗಧಿಪಡಿಸಿ ಗುಣಮಟ್ಟದ ಆಹಾರವನ್ನು ಪ್ರತಿದಿನ ಪರಿಶೀಲಿಸಿ ಅವುಗಳಿಗೆ ವಿತರಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿದೆ. ಉತ್ತಮ ಗುಣಮಟ್ಟದ

ಹಾಗೂ ಸರಿಯಾದ ಪ್ರಮಾಣದ ಆಹಾರವನ್ನು ಜವಾಬ್ದಾರಿಯುತ ಅಧಿಕಾರಿಗಳ ಸಮಕ್ಷಮದಲ್ಲಿ ಮೃಗಾಲಯ ಪ್ರಾಣಿಗಳಿಗೆ ನೀಡಲಾಗುತ್ತಿದೆ. ಅಮೂಲ್ಯ ಪ್ರಾಣಿಗಳ ಆರೋಗ್ಯ ನಿರ್ವಹಣೆಗಾಗಿ ಪಶು ವೈದ್ಯರುಗಳು ಕಾರ್ಯನಿರ್ವಹಿಸುತ್ತಿದ್ದು, ಅಗತ್ಯವಿದ್ದ ಸಂದರ್ಭದಲ್ಲಿ ನುರಿತ ತಜ್ಞರ ಸಲಹೆ ಪಡೆದು ಅಗತ್ಯ ಚಿಕಿತ್ಸೆ ಸಕಾಲದಲ್ಲಿ ನೀಡಲಾಗುತ್ತಿದೆ. ಅಲ್ಲದೆ. ಪಶುವೈದ್ಯರು ಮತ್ತು ಜೈವಿಕ ಸಂಸ್ಥೆ ಬೆಂಗಳೂರು, ಪಶುವೈದ್ಯ ಇಲಾಖೆ ಹಾಗೂ ವೃತ್ತಿಪರ ವೈದ್ಯಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕವಿದ್ದು ತುರ್ತು ಸಂದರ್ಭದಲ್ಲಿ ಇವರುಗಳ ಸೇವೆಯನ್ನು ಪಡೆಯಲಾಗುತ್ತಿದೆ. ಇದರ ಜೊತೆಗೆ ನುರಿತ ವೈದ್ಯರುಗಳನ್ನೊಳಗೊಂಡ ಆರೋಗ್ಯ ಸಮಿತಿಯನ್ನು ಸಹ ರಚಿಸಲಾಗಿದೆ.

ಪಶ್ಚಿಮ ವಾಹಿನಿ ನಿಧಿ ಜೋಡಣಾ ಯೋಜನೆಯ ರೂಪುರೇಶೆಗಳು

557 (804)ಶ್ರೀ ಖಾದರ್ ಯ.ಟಿ. (ಮಂಗಳೂರು) ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆ ಒಳಗೊಂಡಂತೆ ಕರಾವಳಿ ಪ್ರದೇಶದಲ್ಲಿ ನದಿ ಜೋಡಣೆಯ ಪಶ್ಚಿಮ ವಾಹಿನಿ ಯೋಜನೆಯು ಯಾವ ಹಂತದಲ್ಲಿದೆ;

(ಆ) ಈ ಯೋಜನೆಯನ್ನು ಜಾರಿಗೆ ತರಲು ಸರ್ಕಾರವು ಖರ್ಚು ಮಾಡಲು ಉದ್ದೇಶಿಸಿರುವ ಹಣವೆಷ್ಟು;

(ಇ) ಈ ಯೋಜನೆಯ ಜಾರಿಯಿಂದ ಯಾವ ಯಾವ ಜಿಲ್ಲೆಗಳಿಗೆ ಆಗುವ ಅನುಕೂಲಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

(ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳನ್ನೊಳಗೊಂಡಂತೆ ಕರಾವಳಿ ಪ್ರದೇಶದಲ್ಲಿ ನದಿ ಜೋಡಣೆಯ ಹಿನ್ನೆಲೆ "ಸೌಭಾಗ್ಯ ಸಂಜೀವಿನಿ" ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. "ಸೌಭಾಗ್ಯ ಸಂಜೀವಿನಿ" ಯೋಜನೆ ಬಗ್ಗೆ ಸರ್ಕಾರವು ವಿಶೇಷ ಗಮನ ಹರಿಸಲು ಮತ್ತು ಸದರಿ ಯೋಜನೆಯ ಸಮಗ್ರವಾಗಿ ತನಿಖೆ ನಡೆಸಲು ತಜ್ಞರ ಸಮಿತಿಯನ್ನು ರಚಿಸಲು ತೀರ್ಮಾನಿಸಿದಂತೆ, ಶ್ರೀ ಕೆ.ಸಿ. ರೆಡ್ಡಿ, ಸಲಹೆಗಾರರು ವರದಿಯನ್ನು ಸಲ್ಲಿಸಿದ್ದು, "ಸೌಭಾಗ್ಯ ಸಂಜೀವಿನಿ" ಯೋಜನೆಯ ಕುರಿತು ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಹಂತ ಹಂತವಾಗಿ ಕೈಗೊಳ್ಳುವಂತೆ ಸೂಚಿಸಿ ಸರ್ಕಾರವು ಸಂಖ್ಯೆ